ಅಸಲು ದಾವಾ ಸಂಖ್ಯೆ. 132/2020

ಪಿ.ಡಬ್ಲು. 1

**ಸಾಕ್ಷಿಯನ್ನು ದಿನಾಂಕಃ 24.10.2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀಸವಾಲು ಃ ಶ್ರೀ ಎಸ್.ಬಿ.ಜೆ., ಪ್ರತಿವಾದಿ ಪರ ವಕೀಲರಿಂದಃ**

ಈ ದಾವೆಯನ್ನು ನಾನು ಪ್ರತಿವಾದಿಯರ ಮೇಲೆ ಆಸ್ತಿ ಬೇಕು ಎಂದು ದಾಖಲಿಸಿರುತ್ತೇನೆ. ಈ ದಾವೆ ನಾನು ನನ್ನ ಅಕ್ಕ ಮತ್ತು ತಮ್ಮನ ಮೇಲೆ ದಾಖಲಿಸಿದ್ದೇನೆ. ದಾವಾ ಆಸ್ತಿ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ಆಲಗೂಂಡಿ ಗ್ರಾಮದ 3 ಮನೆ ಹಾಗೂ ಎರಡುವರೆ ಎಕರೆ ಜಮೀನು ಇದೆ. ದಾವಾ ಅಸ್ತಿಗಳ ಚೆಕ್ಕಬಂದಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಕ್ಷೇತ್ರ ಹೇಳಲು ಬರುದಿಲ್ಲ. ದಾವಾ ಆಸ್ತಿಗಳ ಸರ್ವೆ ನಂಬರ ಮತ್ತು ಚೆಕ್ಕಬಂದಿಯನ್ನು ನಾನು ಹೇಳಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಯಾವ ಸರ್ವೆ ನಂಬರಿನ ಆಸ್ತಿಗಳಿಗೆ ಸಂಬಂಸಿದಂತೆ ದಾಖಲಿಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾಣೆ ಪ್ರಮಾಣ ಪತ್ರದಲ್ಲಿನ ಸಂಗತಿ ನನಗೆ ಗೊತ್ತಿಲ್ಲ ಎಂದರೆ ಸರಿ. ಪ್ರತಿವಾದಿಯರಿಗೆ ಮೊಸ ಮಾಡುವ ಉದ್ದೇಶಕ್ಕೆ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ಮುಧೋಳ.

ಸಾಕ್ಷಿಯ ಸಹಿ